ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಸೋಮವಾರ, ದಿನಾಂಕ : 21 ನೇ ಸೆಪ್ಟೆಂಬರ್, 2020

ವನ್ಯ ಜೀವಿಗಳ ಕಳ್ಳ ಬೇಟೆ

ಶ್ರೀ ಎಸ್. ನಾಗರಾಜ್(ಸಂದೇಶ್‌ನಾಗರಾಜ್)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) -

143 (114) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ -

(ಅ) ಜನವರಿ - 2020ರಿಂದ ಮೈಸೂರು-ಚಾಮರಾಜನಗರ ಜಿಲ್ಲೆಯ ಅರಣ್ಯ ಪ್ರದೇಶದಲ್ಲಿ, ವನ್ಯ ಜೀವಿ ದಾಳಿಯಿಂದ ಮೃತಪಟ್ಟ ಹಾಗೂ ಗಾಯಗೊಂಡವರ ಸಂಖ್ಯೆ ಎಷ್ಟು; ರೈತಾಪಿ ಜನರಿಗೆ ಸೇರಿದ ಎಷ್ಟು ಜಾನುವಾರುಗಳು (ಹಸು, ಎತ್ತು, ಎಮ್ಮೆ, ಆಡು, ಕುರಿ) ಮೃತಪಟ್ಟಿರುತ್ತವೆ; ಇವರಿಗೆ ಪರಿಹಾರದ ಹಣ ವಿತರಣೆ ಮಾಡಲಾಗಿದೆಯೇ; (ವಿವರ ಒದಗಿಸುವುದು)

(ಆ) ಸದರಿ ಅವಧಿಯಲ್ಲಿ ಈ ಅರಣ್ಯದಲ್ಲಿ ನಡೆದಿರುವ ಕಳ್ಳಬೇಟೆ ಪ್ರಕರಣಗಳು ವರದಿಯಾಗಿದೆಯೇ; ಎಷ್ಟು ವನ್ಯಜೀವಿಗಳು ಮೃತಪಟ್ಟಿವೆ; ಕಳ್ಳಬೇಟೆಗಾರರನ್ನು ಬಂಧಿಸಲಾಗಿದೆಯೇ; ಈ ಕಳ್ಳಬೇಟೆ ಪ್ರಕರಣಗಳ ಹಿಂದಿರುವ ಜಾಲವನ್ನು ಬೇಧಿಸಲು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ?